ಸ್ಥಾಪನೆಯ ಬಂಧನವನ್ನು ಮನಗಂಡು ಸರಕಾರ ಹೊಸ ಸ್ಟೀಲ್ ರೀರೋಲಿಂಗ್ ಪ್ಲಾಂಟ್‌ಗಳಿಗೆ ತತ್ವಾರ್ಹಾ ಬಂದಿರುವ ಅರ್ಜಿಗಳ ವಿಲೇವಾರಿ ಹಾಗೂ ಮಂಜೂರಾತಿಯನ್ನು ಯಾವ ದಿನಾಂಕದಂದು ತಡೆ ಹಿಡಿಯಲಾಗಿದೆ ಎಂಬುದನ್ನೂ ತಿಳಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಾನ್ಯ ಮಂತ್ರಿಯವರಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

(೮) ಬೆಂಗಳೂರಿನ ರಾಜಾಜಿನಗರದ ಈಸ್ಟ್-ವೆಸ್ಟ್ ಶಾಲೆಯಲ್ಲಿ ಕನ್ನಡವನ್ನು ಬಳಸದಿರುವುದು.

ಶ್ರೀ ಬಿ. ಲಕ್ಕಪ್ಪ.—ಪ್ರಜಾಪ್ರಭುತ್ವ ಇರುವ ಈ ರಾಷ್ಟ್ರದಲ್ಲಿ, ಎಲ್ಲಾ ಭಾಷೆಯ ಜನರೂ ಆಡಳಿತದಲ್ಲಿ ಭಾಗವಹಿಸಲು ಅನುಕೂಲವಾಗಲೆಂದೇ, ಭಾಷಾವಾರು ಪ್ರಾಂತ್ಯಗಳ ರಚನೆಯಾಗಿ ಆಯಾ ರಾಜ್ಯದ ಆಡಳಿತವೆಲ್ಲ ಆಯಾ ರಾಜ್ಯ ಭಾಷೆಯಲ್ಲಿ ನಡೆಸಲಾಗುತ್ತಿದೆ. ಅಂತೆಯೇ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಹಂತದಲ್ಲೂ ಕನ್ನಡವನ್ನು ಕಡ್ಡಾಯಗೊಳಿಸಿ, ಈ ರಾಜ್ಯದಲ್ಲಿ ಇರುವ ಐ. ಎ. ಎಸ್. ಅಧಿಕಾರಿಗಳಿಂದ ಹಿಡಿದು ಎಲ್ಲಾ ಅಧಿಕಾರಿಗಳೂ ಕಡ್ಡಾಯವಾಗಿ ಕನ್ನಡವನ್ನು ಕಲಿಯಬೇಕಾಗಿದೆ. ಇದಕ್ಕಾಗಿ ಸರ್ಕಾರ ತನ್ನದೇ ಆದ ವಿಶೇಷ ಗಮನವನ್ನೂ ಸಹ ಹರಿಸಿದೆ. ಕನ್ನಡ-ಕನ್ನಡ ಎನ್ನುವ ಧ್ವನಿ ಮುಗಿಲು ಮುಟ್ಟಿದೆ. ಆದರೆ ಬೆಂಗಳೂರಿನ ರಾಜಾಜಿನಗರದಲ್ಲಿರುವ ಈಸ್ಟ್‌ವೆಸ್ಟ್ ಇಂಗ್ಲೀಷ್ ಶಾಲೆಯ ಆಡಳಿತದ ವರ್ಗವನ್ನು ಈ ಧ್ವನಿ ಮುಟ್ಟಿಲ್ಲ, ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಯಾವುದಾದರೂ ವಿದ್ಯಾರ್ಥಿ ಕನ್ನಡ ತರಗತಿ ವೇಳೆಯ ವಿನಹ ಬಾಯಿತಪ್ಪಿ ಒಂದು ಕನ್ನಡ ಪದವನ್ನಾಡಿದರೆ ಆ ಹುಡುಗನಿಗೆ ಒಂದು ಕನ್ನಡ ಮಾತಿಗೆ ನಾಲ್ಕು ರೂಪಾಯಿಯಂತೆ ದಂಡ ವಿಧಿಸಲಾಗುತ್ತಿದೆ. ಇಲ್ಲವೆ, 'ಐ ಕೆನ್ನಾಟ್ ಸ್ಪೀಕ್ ಕನ್ನಡ' ಎಂಬ ವಾಕ್ಯವನ್ನು ಇಂಗ್ಲೀಷಿನಲ್ಲಿ ಒಂದು ನೂರು ಬಾರಿ ಬರೆಯುವ ಶಿಕ್ಷೆ ವಿಧಿಸಲಾಗುತ್ತದೆ. ಇದೂ ಮೀರಿದರೆ ಇಂಗ್ಲೀಷ್ ವರ್ಣಮಾಲೆಯಲ್ಲಿರುವ ಒಂದೊಂದು ಅಕ್ಷರವನ್ನೂ ಒಂದು ಸಾವಿರ ಸಾರಿ ಬರೆದು, ಪೋಷಕರಿಂದ ಸಹಿ ಪಡೆದು ಶಾಲಾ ಆಡಳಿತಾಧಿಕಾರಿಗಳಿಗೆ ತೋರಿಸಬೇಕಾಗುತ್ತದೆ. ಈ ಬಗ್ಗೆ ಬರವಣಿಗೆಯಲ್ಲಿ ದೂರು ಕೊಡಲು ಕೇಳಿದರೆ ಪೋಷಕರು, ಶಾಲೆಯಲ್ಲಿ ತಮ್ಮ ಮಕ್ಕಳು ಶಿಕ್ಷೆಗೆ ಒಳಗಾಗುತ್ತಾರೆಂದು ಹೆದರಿ ಒಪ್ಪುವುದಿಲ್ಲ. ಮೇಲ್ಕಂಡ ಶಾಲೆಯ ವರ್ತನೆ ಸರಕಾರದ ಕನ್ನಡ ಕಡ್ಡಾಯ ಎಂಬ ಘೋಷಣೆಯನ್ನು ಅಪಚಾರ ಮಾಡಿದಂತಾಗುತ್ತದೆ. ಇದೇ ಅಲ್ಲದೆ ಸರಕಾರದ ಮನ್ನಣೆ ಪಡೆದಿರುವ ಇಂಗ್ಲೀಷ್ ಶಾಲೆಗಳ ವರ್ತನೆ ಇದೇ ರೀತಿ ಇರುತ್ತದೆಂದು ಭಾವಿಸುತ್ತಾ ಸರಕಾರ ರಾಜ್ಯದಲ್ಲಿರುವ ಇಂತಹ ಇಂಗ್ಲೀಷ್ ಮಾಧ್ಯಮ ಶಾಲೆಗಳ ಮನ್ನಣೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದೇ ಅಲ್ಲದೆ ಈ ಮೇಲ್ಕಂಡ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸಬೇಕಾಗಿ ಸರಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ವಿದ್ಯಾ ಸಚಿವರ ಪರವಾಗಿ).—ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಮೇಲ್ಮನೆಗೆ ಹೋಗಿರುವುದರಿಂದ ಸಂಬಂಧಪಟ್ಟ ಉತ್ತರವನ್ನು ನನ್ನ ಪತ್ರಿಕೆ ಕೊಟ್ಟಿದ್ದಾರೆ. ಅದನ್ನು ತಮ್ಮ ಅಪ್ಪಣೆ ಪಡೆದು ಓದುತ್ತೇನೆ.

''ಈಸ್ಟ್‌ವೆಸ್ಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಯಾವ ವಿದ್ಯಾರ್ಥಿಗೂ ದಂಡನೆಯನ್ನಾಗಲೀ ಅಥವಾ ಶಿಕ್ಷೆಯನ್ನಾಗಲೀ ಯಾವ ಕಾರಣದಿಂದಲೂ ವಿಧಿಸಿಲ್ಲ. ಇದು ಆಂಗ್ಲ ಭಾಷೆ ಮಾಧ್ಯಮ ಶಾಲೆಯಾದರೂ ಸಹ ಕನ್ನಡಕ್ಕೆ ಆದ್ಯತೆ ಕೊಡಲಾಗಿದೆ. ಮತ್ತು ಕನ್ನಡವನ್ನು ಕಡ್ಡಾಯವಾಗಿ ಕಲಿಸಲಾಗುತ್ತಿದೆ. ಅಲ್ಲದೆ ಉಪಾಧ್ಯಾಯ ವರ್ಗದವರೆಲ್ಲರೂ ಕನ್ನಡ ಬಲ್ಲವರಾಗಿದ್ದು ಮತ್ತು ಆಡಳಿತ ವರ್ಗದವರೂ ಕನ್ನಡ ಮಾತನಾಡಬಲ್ಲವರಾಗಿದ್ದು, ಆರೋಪವು ಸತ್ಯಕ್ಕೆ ದೂರವಾಗಿದೆಯೆಂದು ವಿಚಾರಣೆಯಿಂದ ತಿಳಿದು ಬಂದಿದೆ.''

(೯) ಪುರಸಭೆಗಳನ್ನು ಮಂಡಲ ಪಂಚಾಯ್ತಿಗಳಾಗಿ ಪರಿವರ್ತಿಸುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರ್) ಮತ್ತು ಬಸವರಾಜ್ (ಬ್ರಹ್ಮಾವರ).—

ಶ್ರೀ ಬಸವರಾಜ್ (ಬ್ರಹ್ಮಾವರ).—ಪುರಸಭೆಗಳನ್ನು ಮಂಡಲ ಪಂಚಾಯತಿಗಳಾಗಿ ಪರಿವರ್ತಿಸುವಾಗ, ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಮತ್ತು ಸಾಲಿಗ್ರಾಮ ಪುರಸಭೆಗಳು ಗ್ರಾಮೀಣ ಪರಿಸರ ಹೊಂದಿದ್ದರೂ, ಮಂಡಲ ಪಂಚಾಯತುಗಳಾಗಲು ಸಂಪೂರ್ಣ ಅರ್ಹತೆ ಪಡೆದಿದ್ದರೂ,